ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ, ೨೨ನೇ ಮಾರ್ಚ್ ೧೯೯೪, ಚೈತ್ರ ೮, ಶಕ ೧೯೧೫

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧.೨೦ ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು : (ಶ್ರೀ. ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚಕ ನಿರ್ಣಯ

ಮಾಜಿ ಶಾಸಕರುಗಳಾದ ಶ್ರೀ ಕೆ.ಬಿ. ಶಿವಯ್ಯ, ಶ್ರೀ ಅಲ್ಲಂ ಕರೀಬಸಪ್ಪ, ಶ್ರೀ ಚಂದ್ರಶೇಖರ ಎನ್. ಪಾಟೀಲ್ ಮತ್ತು ಹಿರಿಯ ಚಿತ್ರ ನಟಿ ಶ್ರೀಮತಿ ದೇವಿಕಾ ರಾಣಿ, ಕಾದಂಬರಿಗಾರ್ತಿ ಶ್ರೀಮತಿ ಎಂ.ಕೆ. ಇಂದಿರಾ, ಕನ್ನಡದ ಹಿರಿಯ ನಾಟಕಕಾರ ಪರ್ವತವಾಣಿ ಶ್ರೀ ನರಸಿಂಗ್‌ರಾವ್ ಇವರುಗಳು ನಿಧಾನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

1. ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ.ಬಿ. ಶಿವಯ್ಯನವರು ದಿನಾಂಕ 18-02-1994ರಂದು ನಿಧನರಾದರು.

ಸ್ವಾತಂತ್ರ್ಯ ಹೋರಾಟಗಾರರು, ಗಾಂಧೀವಾದಿಗಳು ಆಗಿದ್ದ ಶ್ರೀ ಶಿವಯ್ಯನವರು ಐದನೇ ಮತ್ತು ಆರನೇ ವಿಧಾನ ಸಭೆಗೆ ನಂಜನಗೂಡು ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಶ್ರೀ. ದೇವರಾಜ ಅರಸು ಅವರ ಮಂತ್ರಿ ಮಂಡಲದಲ್ಲಿ ರೇಷ್ಮೆ ಖಾತೆ ಸಚಿವರಾಗಿದ್ದರು. ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯಾಗಿ ಕೂಡ ಸೇವೆ ಸಲ್ಲಿಸಿರುತ್ತಾರೆ.

2. ಮಾಜಿ ವಿಧಾನ ಸಭಾ ಸದಸ್ಯರಾಗಿದ್ದ ಶ್ರೀ ಅಲ್ಲಂ ಕರೀಬಸಪ್ಪನವರು ದಿನಾಂಕ 07-03-1994ರಂದು ನಿಧನರಾದರು.

ಶ್ರೀಯುತರು ಕುರುಗೋಡು ವಿಧಾನ ಸಭಾ ಕ್ಷೇತ್ರದಿಂದ ಮೂರನೇ ಮತ್ತು ನಾಲ್ಕನೇ ವಿಧಾನ ಸಭೆಗೆ ಚುನಾಯಿತರಾಗಿದ್ದರು. ಶ್ರೀಯುತರು ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿ, ಬಳ್ಳಾರಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ, ಬಳ್ಳಾರಿ ರೋಟರಿ ಕ್ಲಬ್ಬಿನ ಸದಸ್ಯರಾಗಿ ಹಾಗೂ ರಾಜ್ಯ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

3. ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ. ಚಂದ್ರಶೇಖರ ಎನ್. ಪಾಟೀಲ ಅವರು ದಿನಾಂಕ 09-03-1994ರಂದು ನಿಧನರಾದರು.

ಶ್ರೀ ಪಾಟೀಲ್‌ರವರು ರಾಯಚೂರು ಜಿಲ್ಲೆಯ ಲಿಂಗಸುಗೂರು ಕ್ಷೇತ್ರದಿಂದ ಐದನೇ ವಿಧಾನ ಸಭೆಗೆ ಆಯ್ಕೆಯಾಗಿದ್ದರು. ಶ್ರೀ ದೇವರಾಜ ಅರಸು ಅವರ ಮಂತ್ರಿ ಮಂಡಲದಲ್ಲಿ ಕೃಷಿ ಹಾಗೂ ಸಹಕಾರ ಸಚಿವರಾಗಿದ್ದರು. 1964 ರಿಂದ 1968ರವರೆಗೆ ಲಿಂಗಸೂರು ಪುರಸಭಾ ಅಧ್ಯಕ್ಷರಾಗಿದ್ದರು. 1968 ರಿಂದ 1970ರವರೆಗೆ ರಾಯಚೂರು ಜಿಲ್ಲೆಯ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿರುತ್ತಾರೆ.

4. ಭಾರತೀಯ ಚಲನಚಿತ್ರರಂಗದ ಸರ್ವಶ್ರೇಷ್ಠ ಅಭಿನೇತ್ರಿ ಶ್ರೀಮತಿ ದೇವಿಕಾ ರಾಣಿ ರೋರಿಚ್ ಅವರು ದಿನಾಂಕ 09-03-1994ರಂದು ನಿಧನರಾದರು.

ಟಾಕಿ ಚಿತ್ರದ ಮೊಟ್ಟಮೊದಲ ನಾಯಕನಟಿ ಶ್ರೀಮತಿ ದೇವಿಕಾರಾಣಿಯವರು 'ಅಚೂತ್ ಕನ್ಯ' 'ಜವಾನಿ ಕಿ ಹವ' 'ಜೀವನ್ ನ್ಯಾಯ' 'ಸಾವಿತ್ರಿ' ಹಾಗೂ ಇನ್ನಿತರ ಚಿತ್ರಗಳಲ್ಲಿ ನೀಡಿದ ಅಭಿನಯದಿಂದ ಖ್ಯಾತಿ ಹೊಂದಿದ್ದರು. ಚಲನಚಿತ್ರ ನಿರ್ಮಾಪಕಿಯಾಗಿಯೂ ಉತ್ತಮ ಚಿತ್ರಗಳನ್ನು ತೆರೆಗೆ ನೀಡಿದ್ದಾರೆ. ಅವರು ಸಂಗೀತ, ನೃತ್ಯ ಅಕಾಡಮಿ, ಕೇಂದ್ರ ನೃತ್ಯ, ನಾಟಕ, ಸಂಗೀತ ಅಕಾಡೆಮಿಗಳಲ್ಲಿ ಕೇಂದ್ರ ಸರ್ಕಾರದ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಅವರು ಸಲ್ಲಿಸಿದ ಸೇವೆಗೆ ಪದ್ಮಶ್ರೀ ಪ್ರಶಸ್ತಿ, ಪ್ರಪ್ರಥಮ ದಾದಾಸಾಹೇಬ ಪಾಲ್ಕೆ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿಗಳೂ ದೊರಕಿದ್ದವು.

5. ಹಿರಿಯ ಕಾದಂಬರಿಗಾರ್ತಿ ಶ್ರೀಮತಿ ಎಂ.ಕೆ. ಇಂದಿರಾ ಅವರು ದಿನಾಂಕ: 15-03-1994ರಂದು ನಿಧನರಾದರು.

ಕನ್ನಡದ ಮಹಿಳಾ ಬರಹಗಾರರಲ್ಲಿ ಅಗ್ರಗಣ್ಯರಾಗಿದ್ದ ಶ್ರೀಮತಿ ಇಂದಿರಾರವರು ಕಾದಂಬರಿ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಸ್ಮರಣೀಯವಾದುದು. ಹೆಣ್ಣಿನ ನೋವು-ನಲಿವುಗಳ ಸಹಜ ಚಿತ್ರಣವನ್ನು ತಮ್ಮ ಬರವಣಿಗೆಯಲ್ಲಿ ರೂಪಿಸಿದ್ದಾರೆ. ಸ್ವಾತಂತ್ರ್ಯ ನಂತರದ ಭಾರತದ ಮಹಿಳೆಯ ಸಮಸ್ಯೆಗಳನ್ನೇ ತಮ್ಮ ಕಥೆಯಾಗಿಸಿ ಮಹಿಳೆಯರನ್ನು ಜಾಗೃತಗೊಳಿಸಿದ ಇವರಿಗೆ 1975ರಲ್ಲಿ ಶ್ರೇಷ್ಠ ಲೇಖಕಿ ಪ್ರಶಸ್ತಿ ಹಾಗೂ ನವರತ್ನ (ಕಥಾ ಸಂಕಲನ) ಸದಾನಂದ ಮತ್ತು ಫಣಿಯಮ್ಮ ಕೃತಿಗಳಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರತಿವೆ.

6. ಕನ್ನಡದ ಹಿರಿಯ ನಾಟಕಕಾರ ಪರ್ವತವಾಣಿ ಶ್ರೀ ನರಸಿಂಗ್‌ರಾವ್ ಅವರು ದಿನಾಂಕ 17-03-1994ರಂದು ನಿಧನರಾದರು.

ಅದ್ಭುತ ಲವಲವಿಕೆಯ ಪಕ್ವ ಹಾಸ್ಯದ ಹೊನಲು ಹರಿಸಿ ನಗುವಿನ ಸಹಜ ಧರ್ಮ ಪಾಲಿಸಿದ ಕೀರ್ತಿ ಅವರದಾಗಿತ್ತು. ಅರ್ಥಶಾಸ್ತ್ರದಲ್ಲಿ ಬಿ.ಎ. (ಆನರ್ಸ್) ಮಾಡಿದ್ದರು. ಅವರು ನಾಟಕ ರಚನೆಯಲ್ಲಿ ಮಾತ್ರವಲ್ಲದೆ ರಂಗಸಜ್ಜಿಕೆಯಲ್ಲಿಯೂ ನಿಷ್ಣಾತರು. 80 ಕೃತಿಗಳನ್ನು ರಚಿಸಿರುತ್ತಾರೆ. ವಾರ್ಷಿಕೋತ್ಸವ ಆದಃಪಾತಾಳ, ಬಹುದ್ದೂರ ಗಂಡ, ಪುತ್ತಳಿ, ಕವಿ ಭಿಕ್ಷೆ, ಕೀಚಕ, ಮುಕುಟ ಮೂಗುತಿ, ಅವರ ಪ್ರಮುಖ ನಾಟಕಗಳಾಗಿದ್ದವು. ಕೇಂದ್ರ ಸಾಹಿತ್ಯ ಅಕಾಡಮಿಯ ಪೆಲೋಷಿಪ್, ರಾಜ್ಯ ಸಾಹಿತ್ಯ ನಾಟಕ ಅಕಾಡೆಮಿಯ ಪ್ರಶಸ್ತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಸೇರಿ ಹಲವು ಗೌರವಗಳಿಗೆ ಅವರು ಪಾತ್ರರಾಗಿದ್ದರು.

ನಿಧನ ಹೊಂದಿದವರ ಸ್ಮರಣಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸದಸ್ಯರು ಮೌನ ಆಚರಿಸಿದ ನಂತರ)

ಈ ಸಭೆ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ರಾಜ್ಯದ ಕೆಲವು ಕಡೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಸರ್ಕಾರದ ಹಸ್ತಕ್ಷೇಪ

+ ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಧಾನಸಭೆ ನಿಯಮ ಹಾಗೂ ಕಾರ್ಯವಿಧಾನದ ನಿಯಮಾವಳಿ